## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.

ಓ.ಎಸ್.38/2022

ಸಾಕ್ಷಿಯನ್ನು ದಿಃ **18.12.2025** ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರಃಶ್ರೀ**. N. N **ವಕೀಲರಿಂದ**:

ದಾವಾ ಸ್ವತ್ತು ಎಷ್ಟನೇ ಮುಖ್ಯ ರಸ್ತೆ ಮತ್ತು ಎಷ್ಟನೇ ಅಡ್ಡರಸ್ತೆಯಲ್ಲಿ ಇದೆ ಎಂದು ಗೊತ್ತಿದೆಯೇ ಎಂದರೆ ಗೊತ್ತಿಲ್ಲ. ಅದರಲ್ಲಿ RCC ಕಟ್ಟಡ ಎಷ್ಟು ಅಡಿ, ಶೀಟ್ ಕಟ್ಟಡ ಎಷ್ಟು ಅಡಿ ಮತ್ತು ಖಾಲಿ ಜಾಗ ಎಷ್ಟು ಇದೆ ಎಂದರೆ ಪೂರ್ತಿ RCC ಕಟ್ಟಡ ಇದೆ. ಖಾಲಿ ಜಾಗ ಎಷ್ಟು ಇದೆ ಎಂದು ಗೊತ್ತಿಲ್ಲ. ದಾವಾ ಸ್ವತ್ತಿನ ಮೇಲೆ ಸುಂದರಂ ಫೈನಾನ್ಸ್ ನಲ್ಲಿ 10 ಲಕ್ಷ ಇತ್ತು. ಅದನ್ನು ತೀರಿಸಿದ್ದಿರಾ ಎಂದರೆ 1ನೇ ಪ್ರತಿವಾದಿಗೆ ವಹಿಸಿದ್ದು, ಅವರೇ ಕಟ್ಟುತ್ತಿದ್ದಾರೆ. ಆ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿದ್ದಿರಾ ಎಂದರೆ ಇಲ್ಲ. ದಾವಾ ಸ್ವತ್ತಿನ ಬಗ್ಗೆ ಕರಾರು ಮಾಡಿಕೊಳ್ಳುವ ಕಾಲಕ್ಕೆ ಪ್ರತಿವಾದಿಯರಿಂದ ಭದ್ರತೆಗಾಗಿ ಪಡೆದುಕೊಂಡಂತಹ 60 ಖಾಲಿ ಚೆಕ್ ಗಳು ಮತ್ತು ಎರಡು ಬಾಂಡ್ ಪೇಪರ್ ಗಳನ್ನು ಉಪಯೋಗಿಸಿ ಈಗಾಗಲೇ ತರಿಕೆರೆ ನ್ಯಾಯಾಲಯದಲ್ಲಿ 7 ರಿಂದ 8 ಪ್ರಕರಣಗಳನ್ನು ಬೇರೆ ಬೇರೆ ಯವರ ಹೆಸರಿನಲ್ಲಿ ನಾನುಮತ್ತು ನನ್ನ ಗಂಡ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಂದ ಮೇಲೆ ಹೇಳಿದಂತೆ ಖಾಲಿ ಚೆಕ್ ಗಳನ್ನು ಮತ್ತು ಬಾಂಡ್ ಪೇಪರ್ ಗಳನ್ನು ಪಡೆದು ಅವರ ವಿರುದ್ಧ ಬೆರೆಯವರ ಮೂಲಕ ಪ್ರಕರಣಗಳನ್ನು ದಾಖಲಿಸಿದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಉಳಿಕೆ ಚೆಕ್ಕುಗಳ ಬಗ್ಗೆ ನಾನು ಮತ್ತು ನನ್ನ ಗಂಡ ಪ್ರತಿವಾದಿಯರಿಗೆ ಬೇರೆ ಬೇರೆಯವರ ಮೂಲಕ ಬೇರೆ ನ್ಯಾಯಾಲಯದಲ್ಲಿ ಕೇಸು ದಾಖಲಿಸುತ್ತೇವೆ ಎಂದು ಬೆದರಿಕೆ ಹಾಕುತ್ತಿದ್ದೇವೆ ಎಂದರೆ ಸರಿಯಲ್ಲ. ಆ ರೀತಿ ಬೆದರಿಕೆ ಹಾಕಿದ್ದರೂ ಕೂಡ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಟಿ.ಆರ್.ಅಶೋಕ್ ಮತ್ತು ಜ್ಯೋತಿ ನನ್ನ ಗಂಡನ ಸಹೋದರ ಮತ್ತು ಸಹೋದರಿ ಎಂದರೆ ಸರಿ. ಅವರಿಗೆ ಪ್ರತಿವಾದಿಯರ ಪರಿಚಯ ಇಲ್ಲ ಎಂದರೆ ಗೊತ್ತಿಲ್ಲ. ನನ್ನ ಗಂಡನ ಸ್ನೇಹಿತರಾದ ಟಿ.ವಿ ಜಯಣ್ಣ, ವಾಸುದೇವ, ಮಂಜುಳ ಟಿ.ಡಿ ಗೋವಿಂದಪ್ಪ, ಟಿ.ಆರ್.ರಮೇಶ್ ಕುಮಾರ್ ಮತ್ತು ಟಿ.ಆರ್.ಕಿರಣ್ ಕುಮಾರ್ ರವರಿಗೂ ಪ್ರತಿವಾದಿಯರಿಗೂ ಪರಿಚಯ ಇಲ್ಲ ಎಂದರೆ ಗೊತ್ತಿಲ್ಲ. ಪ್ರತಿವಾದಿಯರು ನನ್ನ ಗಂಡನಿಂದ

ಪಡೆದುಕೊಂಡ ಸಾಲವನ್ನು ಅದಕ್ಕೂ ಹೆಚ್ಚಾಗಿ ತೀರಿಸಿದ್ದರೂ ಸಹ ಕರಾರು ಸಮಯದಲ್ಲಿ ಬರೆದುಕೊಟ್ಟ ದಾಖಲೆಗಳನ್ನು ನಾವು ಉದ್ದೇಶಪೂರ್ವಕವಾಗಿ ವಾಪಸ್ಸು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ, ನನ್ನ ಬಾವ ಮತ್ತು ನಾದಿನಿ ಹಾಗೂ ನನ್ನ ಗಂಡನ ಸ್ನೇಹಿತರ ಬ್ಯಾಂಕ್ ಖಾತಾ extract ಗಳನ್ನು ಹಾಜರುಪಡಿಸಿದರೇ 5 ಕೋಟಿಗೂ ಹೆಚ್ಚು ಹಣ ವರ್ಗಾವಣೆಯಾಗಿದೆ ಎಂದು ಗೊತ್ತಾಗುತ್ತದೆ ಎಂಬ ಕಾರಣಕ್ಕಾಗಿ ಅವುಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಬಾವ, ನಾದಿನಿ ಹಾಗೂ ನನ್ನ ಗಂಡನ ಸ್ನೇಹಿತರ ಬ್ಯಾಂಕ್ ಖಾತೆಯ extract ಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ನನಗೆ ತೊಂದರೆ ಇಲ್ಲ, ಆದರೆ ಅದಕ್ಕೂ ನನಗೂ ಸಂಬಧ ಇಲ್ಲ. ನಮಗೆ ಬರಬೇಕಾದ ಹಣಕ್ಕಿಂತಲೂ ಅತೀ ಹೆಚ್ಚು ಹಣ ಬಂದ್ದಿದರೂ ಸಹ ಪ್ರತಿವಾದಿಯರಿಗೆ ತೊಂದರೆ ಕೊಡಬೇಕು ಎಂದು ಮತ್ತು ಇನ್ನು ಹೆಚ್ಚಿನ ಲಾಭ ಮಾಡಿಕೊಳ್ಳಬೇಕು ಎಂದು ಅವರಿಂದ ಪಡೆದುಕೊಂಡ ಚೆಕ್ಕುಗಳನ್ನು ಮತ್ತು ಕರಾರು ಪತ್ರವನ್ನು ಉಪಯೋಗಿಸಿ ಬೇರೆಬೇರೆಯವರ ಕಡೆಯಿಂದ ಚಕ್ ಪ್ರಕರಣಗಳನ್ನು ಮತ್ತು ನನ್ನ ಮೂಲಕ ಈ ದಾವೆಯನ್ನು ಸಲ್ಲಿಸಿ ಪ್ರತಿವಾದಿಯರಿಗೆ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ. ಈ ದಾವೆ ಊರ್ಜಿತವಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು